ಓ ಎಸ್ ನಂ. 158/2021
ಡಿ ಡಬ್ಲ್ಯೂ: 2
ದಿನಾಂಕ 06-06-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ: ಶ್ರೀ ಎಂ ಓ ಜೆ ವಕೀಲರಿಂದ:</u>

ಪ್ರಸ್ತುತ ದಾವೆಯನ್ನು ಮಂಜುನಾಥರವರು ಲೋಕೇಶಪ್ಪನವರ ವಿರುದ್ದ ಹೂಡಿರುತ್ತಾರೆ. ಏನು ಪರಿಹಾರ ಕೋರಿರುತ್ತಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಜಮೀನು ವಿಚಾರವಾಗಿ ದಾವೆ ಇದೆ ಎಂದು ನುಡಿದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ನಡುವೆ ಯಾವ ವ್ಯವಹಾರಕ್ಕೆ ಏನೇನು ದಾಖಲೆ ಆಗಿದೆ ಎಂದು ನಾನು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ವಾದಿಯಿಂದ ಪ್ರತಿವಾದಿ 2018 ರಲ್ಲಿ ಪಡೆದ ಹಣದ ಭದ್ರತೆಗಾಗಿ ಬರೆದುಕೊಟ್ಟಿದ್ದಾರೆಂದು ಎಂದು ಹೇಳಲಾದ ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ.

2. ನನ್ನ ಅಜ್ಜನ ಹೆಸರು ಕರೆಹನುಮಯ್ಯ. ಸದರಿ ಕರೆಹನುಮಯ್ಯನವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತಿಮ್ಮಯ್ಯ ಎಂದರೆ ನಿಜ. ನನ್ನ ತಂದೆಯ ತಮ್ಮನ ಹೆಸರು ಕೃಷ್ಣಪ್ಪ ಎಂದರೆ ನಿಜ. ಸದರಿ ಕೃಷ್ಣಪ್ಪರವರು 1 ನೇ ಪ್ರತಿವಾದಿ ಮಂಜುನಾಥರವರ ತಂದೆ ಎಂದರೆ ನಿಜ. 1 ನೇ

ಪ್ರತಿವಾದಿಗೆ ತರೀಕೆರೆ ತಾಲ್ಲೂಕು ಹತ್ತಿಗಟ್ಟೆಯಿಂದ ಹೆಣ್ಣನ್ನು ತರಲಾಗಿದೆ. ದಿನಾಂಕ 10/08/2021 ರಂದು ನಾನು ಮತ್ತು ಈ ದಾವೆಯ ಪ್ರತಿವಾದಿಗಳು 5 ಲಕ್ಷ ರೂಗಳನ್ನು ಕೊಟ್ಟಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಹಣ ನೀಡಿದ ಬಗ್ಗೆ ದಾಖಲೆ ಏನಾದರೂ ಇದೆಯಾ ಎಂದರೆ ಸಾಕ್ಷಿ ದಾಖಲೆ ಇಲ್ಲ ನಾನೇ ಪ್ರತ್ಯಕ್ಷ ಸಾಕ್ಷಿ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿ ಪ್ರತಿವಾದಿಯಿಂದ ನನ್ನ ಸಮಕ್ಷಮದಲ್ಲಿ 5 ಲಕ್ಷ ರೂಗಳನ್ನು ಪಡೆದುಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈ ದಿನ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿರುವುದಿಲ್ಲ ಎಂದರೆ ನಿಜ. 2 ನೇ ಪ್ರತಿವಾದಿಯ ನಾಗರಾಜುರವರೇ ಅವರ ಪರ ಸಾಕ್ಷ್ಯ ನುಡಿಯುವಂತೆ ಕರೆಸಿರುತ್ತಾರೆ ಎಂದರೆ ನಿಜ. 2 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗನಾದ ಕಾರಣ ಅವರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.